RNU AIR DHARWAD

SEPTEMBER 19, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕರ್ನಾಟಕದ, ಸೇಂಟ್ ಮೇರಿಸ್ ದ್ವೀಪ ಸಮೂಹಕ್ಕೆ, ಯುನೆಸ್ಕೋ, ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ, ತಾತ್ಕಾಲಿಕ ಸ್ಥಾನ.**
- **ರಾಯಚೂರ ಜಿಲ್ಲೆಯಲ್ಲಿ, 'ಮಹಿಳೆಯರ ಗ್ರಾಮ ಸಭೆ' ಆಯೋಜಿಸಲು, ರಾಜ್ಯ ಮಹಿಳಾ ಆಯೋಗದಿಂದ, ಸೂಚನೆ.**
- **ಮಹಿಳಾ ಅಭ್ಯುದಯದಿಂದ, ಮಹಿಳಾ ನೇತೃತ್ವದ ಅಭಿವೃದ್ಧಿಯತ್ತ, ನಾರಿ ಶಕ್ತಿ ಸಂಕಲ್ಪ.**
- **ಸೇವಾ ಪರ್ವ; ರಾಜ್ಯಾದ್ಯಂತ, ಅಕ್ಟೋಬರ್ 2, ಗಾಂಧಿ ಜಯಂತಿ ವರೆಗೆ, ಸ್ವಚ್ಛತೆಯೇ ಸೇವೆ, ಜನಾಂದೋಲನ**

<><><>

**ಈಗ ವಾರ್ತೆಗಳ ವಿವರ**

<><><>

**ಕರ್ನಾಟಕದ ಭೂ ವೈಜ್ಞಾನಿಕ ಪರಂಪರೆಯ, ಸೇಂಟ್ ಮೇರಿಸ್ ದ್ವೀಪ ಸಮೂಹ, ಯುನೆಸ್ಕೋದ ವಿಶ್ವ ಪರಂಪರೆ ತಾಣಗಳ ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಜೊತೆಗೆ, ಭಾರತದ ಒಟ್ಟು ಏಳು ಹೊಸ ನೈಸರ್ಗಿಕ ತಾಣಗಳನ್ನು, ಯುನೆಸ್ಕೋದ ವಿಶ್ವ ಪರಂಪರೆ ಪಟ್ಟಿಯಲ್ಲಿ ಸೇರಿಸಲಾಗಿದೆ. ಯುನೆಸ್ಕೋ ಪಟ್ಟಿಯಲ್ಲಿ ಸ್ಥಾನ ಪಡೆದ, ದೇಶದ ಒಟ್ಟು ತಾಣಗಳ ಸಂಖ್ಯೆ, ಈಗ 62 ರಿಂದ 69 ಕ್ಕೆ ಏರಿಕೆಯಾಗಿದೆ. ಕೇಂದ್ರ ಸಂಸ್ಕೃತಿ ಸಚಿವಾಲಯ, ಈ ವಿಷಯ ಪ್ರಕಟಿಸಿದ್ದು, ಭಾರತದ, 49 ಸಾಂಸ್ಕೃತಿಕ, 17 ನೈಸರ್ಗಿಕ ಮತ್ತು 3 ಮಿಶ್ರ ಪರಂಪರೆಯ ತಾಣಗಳಿಗೆ, ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ, ಸ್ಥಾನ ನೀಡಿದೆ.**

<><><>

**ರಾಯಚೂರ ಜಿಲ್ಲೆ, ಸಿಂಧನೂರು ಹಾಗೂ ಮಸ್ಕಿ ನಗರ ಸೇರಿದಂತೆ, ತಾಲೂಕು ವ್ಯಾಪ್ತಿಯ, ಅಲೆಮಾರಿ, ಅರೆ ಅಲೆಮಾರಿ ಹಾಗೂ ವಿಮುಕ್ತ ದೇವದಾಸಿಯರನ್ನು ಒಳಗೊಂಡು, ಮಹಿಳಾ ಗ್ರಾಮ ಸಭೆಗಳನ್ನು ನಡೆಸುವಂತೆ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ಜಿಲ್ಲಾಡಳಿತಕ್ಕೆ ನಿರ್ದೇಶಿಸಿದ್ದಾರೆ. ಈ ಸಭೆಗಳಲ್ಲಿ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರ ಕ್ರಮಗಳನ್ನು ಕೈಗೊಂಡ ಬಗ್ಗೆ, ಮಹಿಳಾ ಆಯೋಗಕ್ಕೆ ವರದಿ ಸಲ್ಲಿಸುವಂತೆ, ಸೂಚಿಸಿದರು. ಬಳಿಕ, ಸಿಂಧನೂರಿನ ಸುಕ್ಕಲಪೇಟೆ ಟೌನ್ ಹಾಲ್‌ನಲ್ಲಿ, ಸಿಂಧೋಳ ಸಮುದಾಯದ ಅಲೆಮಾರಿ ಮಹಿಳೆಯರು ಮತ್ತು ವಿಮುಕ್ತ ದೇವದಾಸಿಯರೊಂದಿಗೆ, ಸಂವಾದ ನಡೆಸಿದರು.**

<><><>

ನಮ್ಮ ಸುತ್ತಮುತ್ತ ಸಹಜವಾಗಿ ಬೆಳೆಯುವ, ಸೊಪ್ಪಿನ ವೈವಿಧ್ಯತೆ ಮತ್ತು ಸೇವಿಸುವ ಮಹತ್ವದ ಬಗ್ಗೆ, ಶ್ರೀ ಸಾಮಾನ್ಯರಿಗೆ ತಿಳಿಸಲು, ಸಹಜ ಸಮೃದ್ಧ ಸಂಸ್ಥೆ, ಜರ್ಮನಿಯ ಬಿ.ಐ.ಝಡ್. ಸಹಯೋಗದಲ್ಲಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಅರ್ಬನ್ ಓಯಾಸಿಸ್ ಮಾಲ್‌ನಲ್ಲಿ, ನಾಳೆ ಹಾಗೂ ನಾಡಿದ್ದು, ವಿಶಿಷ್ಟ ಸೊಪ್ಪಿನ ಪ್ರದರ್ಶನ, ಸೊಪ್ಪುಗಳ ಖಾದ್ಯ ಮತ್ತು ಪೇಯ ಮೇಳ ಆಯೋಜಿಸಿದೆ. ಕುಂದಗೋಳದ, ದೇವಧಾನ್ಯ ಮಹಿಳಾ ರೈತ ಉತ್ಪಾದಕರ ಕಂಪೆನಿಯ, ದೇಸಿ ಅಕ್ಕಿ, ಸಿರಿಧಾನ್ಯ ಮತ್ತು ಬೇಳೆಕಾಳು, ಹಣ್ಣುಗಳು, ಮಾರಾಟಕ್ಕೆ ಸಿಗಲಿವೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಂಗಳೂರಿನ ಸಹಜ ಆರ್ಗ್ಯಾನಿಕ್ಸ್ ಸಿ.ಇ.ಓ. ಬಿ. ಸೋಮೇಶ.

<><><>

ಸಿ.ಇ.ಓ. ಬಿ. ಸೋಮೇಶ ಧ್ವನಿ 48 ಸೆಕೆಂದುಗಳು

<><><>

ಧ್ಯೇಯ ಸಂಗೀತ 09 ಸೆಕೆಂದುಗಳು

<><><>

ಸೇವೆ ಮತ್ತು ಸುಶಾಸನ, ಧ್ಯೇಯದೊಂದಿಗೆ 11 ವರ್ಷಗಳನ್ನು ಪೂರ್ಣಗೊಳಿಸಿದ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಪರಿವರ್ತನೆ ಹಾಗೂ ಪ್ರಗತಿಗಾಗಿ, ದೇಶಾದ್ಯಂತ ಸೇವಾ ಪರ್ವವನ್ನು ಆಚರಿಸುತ್ತಿದೆ. ಮಹಿಳಾ ಸಬಲೀಕರಣಕ್ಕೆ, ಪ್ರಧಾನಮಂತ್ರಿಯವರು ವಿಶೇಷ ಒತ್ತು ನೀಡಿದ ಹಿನ್ನೆಲೆ, "ನಾರಿ ಶಕ್ತಿ" ಈಗ, ರಾಷ್ಟ್ರೀಯ ಧ್ಯೇಯವಾಗಿದೆ. ಪ್ರತಿಯೊಬ್ಬ ಮಹಿಳೆ ಘನತೆ, ಸುರಕ್ಷತೆ ಮತ್ತು ಸ್ವಾವಲಂಬನೆಯಿಂದ ಬದುಕಲು ಸಬಲೀಕರಿಸುವ ಸಂಕಲ್ಪ ಹೊಂದಲಾಗಿದೆ. ಮಹಿಳಾ ಅಭಿವೃದ್ಧಿಯಿಂದ, ಮಹಿಳಾ ನೇತೃತ್ವದ ಅಭಿವೃದ್ಧಿಯತ್ತ ದೇಶ ಸಾಗುತ್ತಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 22 ಸೆಕೆಂದುಗಳು

<><><>

ಧಾರವಾಡದ ವಾರ್ಡ್ ಸಂಖ್ಯೆ 8ರ, ಆರೋಗ್ಯ ಕೇಂದ್ರದಲ್ಲಿ, ಸ್ವಸ್ಥ ನಾರಿ ಸಶಕ್ತ ಪರಿವಾರ ಅಭಿಯಾನದಡಿ, ಕಿಶೋರಿಯರ ಆರೋಗ್ಯ ತಪಾಸಣೆ ಶಿಬಿರ ಜರುಗಿತು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸದಸ್ಯ, ಶಂಕರ ಶೇಳಕೆ ಚಾಲನೆ ನೀಡಿದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

'ಸ್ವಚ್ಛತಾ ಹಿ ಸೇವಾ' ಪಾಕ್ಷಿಕದ ಅಂಗವಾಗಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ನಗರದ ವಿವಿಧ ಶಾಲೆಗಳಲ್ಲಿ, ವಿದ್ಯಾರ್ಥಿಗಳಿಗೆ, ತಮ್ಮ ಮನೆಗಳಲ್ಲಿ ಹಸಿ ಕಸ ಮತ್ತು ಒಣ ಕಸವನ್ನು, ಮೂಲದಲ್ಲೇ ವಿಂಗಡಿಸಿ, ಮರುಬಳಕೆ ಹಾಗೂ ನಿ ೀಧಿತ ಏಕ ಬಳಕೆ ಪ್ಲಾಸ್ಟಿಕ್ ಬಗ್ಗೆ ಪ್ರಾತ್ಯಕ್ಷಿಕೆ ಆರಂಭಿಸಿದೆ.

<><><>

'ಸೇವಾ ಪರ್ವ' ಪಾಕ್ಷಿಕದ ಅಂಗವಾಗಿ, ದಾವಣಗೆರೆ ರೈಲು ನಿಲ್ದಾಣದಲ್ಲಿ, ಸ್ವಚ್ಛತಾ ಅಭಿಯಾನ ನಡೆಯಿತು. ನೈಋತ್ಯ ರೇಲ್ವೆ, ಸಹಾಯಕ ಅಭಿಯಂತರ, ಲೋಕೇಶ್ವರಪ್ಪ, ಕಸ ವಿಲೇವಾರಿ ಮತ್ತು ಸ್ವಚ್ಛತೆ, ಕೇವಲ ಇಲಾಖೆಗಳಿಗೆ ಸಂಬಂಧಿಸಿದ ಹೊಣೆಗಾರಿಕೆ ಅಲ್ಲ; ಸಂಘ, ಸಂಸ್ಥೆಗಳು, ಸಾರ್ವಜನಿಕರು ಸಹಕರಿಸಿದರೆ ಮಾತ್ರ, ಸ್ವಚ್ಛತೆಯೇ ಸೇವೆ ಅಭಿಯಾನ, ಸಾರ್ಥಕವಾಗುತ್ತದೆ ಎಂದರು.

<><><>

ಕೋಲಾರ ಜಿಲ್ಲೆಯ, 154 ಗ್ರಾಮ ಪಂಚಾಯಿತಿಗಳಲ್ಲಿ, ಅಕ್ಟೋಬರ್ 2 ಗಾಂಧಿ ಜಯಂತಿ ವರೆಗೆ, ಸ್ವಚ್ಛತೆಯೇ ಸೇವೆ ಪಾಕ್ಷಿಕ ಆಯೋಜಿಸಲಾಗಿದೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಪ್ರವೀಣ ಬಾಗೇವಾಡಿ ತಿಳಿಸಿದ್ದಾರೆ.

<><><>

ಬೆಂಗಳೂರು ದಕ್ಷಿಣ, ರಾಮನಗರ ಜಿಲ್ಲೆಯ, 126 ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಛತಾ ಹೀ ಸೇವಾ ಅಭಿಯಾನದಲ್ಲಿ, ಗ್ರಾಮಗಳ ಕೆರೆ, ಕಟ್ಟೆ, ಕಲ್ಯಾಣಿ ಹಾಗೂ ರಾಸುಗಳ ತೊಟ್ಟಿಯನ್ನು, ಸ್ವಯಂಸೇವಕರು ಸ್ವಚ್ಛಗೊಳಿಸಲಿದ್ದಾರೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಅನ್ಮೋಲ್ ಜೈನ್, ಹೇಳಿದ್ದಾರೆ.

<><><>

ಸರಕು ಮತ್ತು ಸೇವಾ ತೆರಿಗೆ, ಕೇಂದ್ರ ಮಂಡಳಿಯ, 56ನೇ ಸಭೆ ಶಿಫಾರಸಿನಂತೆ, ಪರಿ ್ಕೃತ ದರಗಳು, ಈ ತಿಂಗಳ 22ನೇ ತಾರೀಖು, ನವರಾತ್ರಿಯ ಮೊದಲ ದಿನದಿಂದ, ದೇಶಾದ್ಯಂತ ಜಾರಿಗೊಳ್ಳಲಿವೆ.

<><><>

ಜನ ಸಾಮಾನ್ಯರು ಹಾಗೂ ಮಧ್ಯಮ ವರ್ಗದ ಜನ ಹೆಚ್ಚಾಗಿ ಬಳಸುವ, ಸೈಕಲ್, ಸಿದ್ಧ ಉಡುಪು, ಕರಕುಶಲ ವಸ್ತುಗಳ ಜಿ.ಎಸ್.ಟಿ. ತೆರಿಗೆಯನ್ನು, ಶೇಕಡ 5ಕ್ಕೆ ಇಳಿಸಲು, ಕೇಂದ್ರದ ಜಿ.ಎಸ್.ಟಿ. ಮಂಡಳಿ ಶಿಫಾರಸು ಮಾಡಿದೆ.

<><><>

'ನೆಕ್ಸ್ಟ್ ಜೆನ್ ಜಿ.ಎಸ್.ಟಿ.' ಕುರಿತು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಬೆಳಗಾವಿಯ ಎಸ್.ಎಸ್.ಡಿ. ಮಾಡ್ಯುಲರ್ಸ್ ನಿರ್ದೇಶಕಿ, ಯುವ ಉದ್ಯಮಿ, ದಿವ್ಯಾ ಮಹಾದೇವ ಮುದಿಗೌಡರ.

<><><>

ದಿವ್ಯಾ ಮುದಿಗೌಡರ ಧ್ವನಿ 45 ಸೆಕೆಂದುಗಳು

<><><>

ಸರಕು ಮತ್ತು ಸೇವಾ ತೆರಿಗೆ ನಿಯಮ ಉಲ್ಲಂಘಿಸಿ, 850ಕ್ಕೂ ಹೆಚ್ಚು ಚೀಲಗಳಲ್ಲಿ ಸಾಗಿಸಲಾಗುತ್ತಿದ್ದ, ಅಂದಾಜು 1 ಕೋಟಿ ರೂಪಾಯಿ ಮೌಲ್ಯದ, ಪಾನ್ ಮಸಾಲಾ ಹಾಗೂ ತಂಬಾಕು ಪದಾರ್ಥಗಳನ್ನು, ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ, ದಕ್ಷಿಣ ವಲಯದ, ಜಾರಿ ವಿಭಾಗದ ಅಧಿಕಾರಿಗಳು, ಬೆಂಗಳೂರಿನ ಯಶವಂತಪುರ ರೈಲು ನಿಲ್ದಾಣದಲ್ಲಿ, ವಶ ಪಡಿಸಿಕೊಂಡಿದ್ದಾರೆ. ಹೊಸ ದಿಲ್ಲಿಯಿಂದ, ಬೆಂಗಳೂರಿಗೆ ರೈಲಿನ ಮೂಲಕ, ಈ ಚೀಲಗಳನ್ನು ಸಾಗಿಸಲಾಗಿದೆ. ತನಿಖೆ ಮುಂದುವರೆದಿದೆ.

<><><>

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಚಲನಚಿತ್ರ, "ಚಲೋ ಜೀತೇ ಹೈ", ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಾಲ್ಯದ ಕುರಿತ, ಸ್ವಾಮಿ ವಿವೇಕಾನಂದರ ಜೀವನ ಧ್ಯೇಯವನ್ನಾಧರಿಸಿ, 2018 ರಲ್ಲಿ ತೆರೆಕಂಡ ಚಿತ್ರವನ್ನು, ಅಕ್ಟೋಬರ್ 2, ಗಾಂಧಿ ಜಯಂತಿ ವರೆಗೆ, ರಾಜ್ಯಾದ್ಯಂತ 45 ಚಿತ್ರಮಂದಿರಗಳಲ್ಲಿ, ಮರು ಪ್ರದರ್ಶಿಸಲಾಗುತ್ತಿದೆ. ರಾಜ್ಯಾದ್ಯಂತ ಒಟ್ಟು 315 ಪ್ರದರ್ಶನಗಳು, ಆಯೋಜಿತವಾಗಿವೆ.

<><><>

ಧಾರವಾಡದ ಐನಾಕ್ಸ್ ಮಾಲ್‌ನಲ್ಲಿ ಪ್ರತಿ ದಿನ ಸಂಜೆ, 6.15ಕ್ಕೆ ಚಲನಚಿತ್ರ ಪ್ರದರ್ಶನಗೊಳ್ಳಲಿದೆ.

<><><>

ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ, ಪಾಂಡೇಶ್ವರದ, ಫಾರಂ ಫಿಜ್ಜಾ ಮಾಲ್ ಪಿ.ವಿ.ಆರ್. ಚಿತ್ರಮಂದಿರದಲ್ಲಿ, ಸಂಜೆ 6.20 ಕ್ಕೆ ಚಿತ್ರ ಪ್ರದರ್ಶನವಾಗಲಿದೆ.

<><><>

'ಚಲೋ ಜೀತೇ ಹೈ: ಸೇವಾ ಕಾ ಸಮ್ಮಾನ್' ದಡಿ, ಸಮಾಜದ ಮೌನಿ ವೀರರು ಎಂದು ಪರಿಗಣಿತರಾದ, ಕಾವಲುಗಾರರು, ಸ್ವಚ್ಛತಾ ಸೇನಾನಿಗಳು, ಚಾಲಕರು, ಸಿಪಾಯಿ ಮುಂತಾದ, 'ಸೈಲೆಂಟ್ ಹೀರೋಸ್', ನಮ್ಮ ದೈನಂದಿನ ಜೀವನದ, ಸುಗಮ ಕಾರ್ಯನಿರ್ವಹಣೆಗೆ, ಸದ್ದಿಲ್ಲದೆ ಕೊಡುಗೆ ನೀಡುವವರನ್ನು ಗೌರವಿಸಲಾಗುತ್ತದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕರ್ನಾಟಕದ, ಸೇಂಟ್ ಮೇರಿಸ್ ದ್ವೀಪ ಸಮೂಹಕ್ಕೆ, ಯುನೆಸ್ಕೋ, ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ, ತಾತ್ಕಾಲಿಕ ಸ್ಥಾನ.
- ರಾಯಚೂರ ಜಿಲ್ಲೆಯಲ್ಲಿ, 'ಮಹಿಳೆಯರ ಗ್ರಾಮ ಸಭೆ' ಆಯೋಜಿಸಲು, ರಾಜ್ಯ ಮಹಿಳಾ ಆಯೋಗದಿಂದ, ಸೂಚನೆ.
- ಮಹಿಳಾ ಅಭ್ಯುದಯದಿಂದ, ಮಹಿಳಾ ನೇತೃತ್ವದ ಅಭಿವೃದ್ಧಿಯತ್ತ, ನಾರಿ ಶಕ್ತಿ ಸಂಕಲ್ಪ.
- ಸೇವಾ ಪರ್ವ; ರಾಜ್ಯಾದ್ಯಂತ, ಅಕ್ಟೋಬರ್ 2, ಗಾಂಧಿ ಜಯಂತಿ ವರೆಗೆ, ಸ್ವಚ್ಛತೆಯೇ ಸೇವೆ, ಜನಾಂದೋಲನ

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>